**ಸಾಕ್ಷಿಗೆ ದಿನಾಂಕ:24-09-2025 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: 1 ನೇ ಪ್ರತಿವಾದಿ ಪರ ಶ್ರೀ.SNR ವಕೀಲರಿಂದ ::**

ನಾನು ಹುಟ್ಟಿದಾಗಿನಿಂದ ತರೀಕೆರೆಯಲ್ಲೇ ವಾಸ ಮಾಡಿಕೊಂಡಿರುತ್ತೇನೆ. ನನಗೆ ವಾದಿಯ ಪರಿಚಯ ಇರುತ್ತದೆ. ವಾದಿಯು ನಮ್ಮ ಸೊಸೈಟಿಯ ಸದಸ್ಯರಾಗಿದ್ದು ಆ ರೀತಿ ಅವರು ನನಗೆ ಪರಿಚಯರಾಗಿರುತ್ತಾರೆ. ನಮ್ಮ ಸೊಸೈಟಿಯ ಭೂ ನಿರ್ಮಾಣ ಸಹಕಾರ ಸೊಸೈಟಿ, ತರೀಕೆರೆ ಆಗಿರುತ್ತದೆ. ಸದರಿ ಸೊಸೈಟಿಯಲ್ಲಿ ನಾನು ಅಂದಾಜು 1980-82 ರಲ್ಲಿ ಅಧ್ಯಕ್ಷನಾಗಿರಬಹುದು, ನಿಖರವಾಗಿ ಈಗ ನೆನಪಿಲ್ಲ. ನನಗೆ ನಮ್ಮ ಸೊಸೈಟಿಯ ಬಗ್ಗೆ ಮಾಹಿತಿ ಹಾಗೂ ಜ್ಞಾನ ಇರುತ್ತದೆ ಎಂದರೆ ಸರಿ . 1 ನೇ ಪ್ರತಿವಾದಿ ನನಗೆ ಪರಿಚರಾಯ ಇರುವುದಿಲ್ಲ. ದಾವಾ ಷೆಡ್ಯೂಲ್ ಸ್ವತ್ತು ವಿಜ್ಞಾನ Industries ಹಾಗೂ ಬೈಲೂ ಬಸವೇಶ್ವರ ದೇವಸ್ಥಾನದ ಮದ್ಯದಲ್ಲಿ ಇರುತ್ತದೆ. ನಮ್ಮ ಸೊಸೈಟಿಯಲ್ಲಿ ಲೇಔಟ್ ಸ್ಥಾಪಿಸಲು ಯಾವ ಯವ ಜಮೀನುಗಳನ್ನು ಖರೀದಿ ಮಾಡಕಲಾಗಿರುತ್ತದೆ ಎಂದು ನನಗೆ ತಿಳಿದಿರುತ್ತದೆ. ಆ ರೀತಿ ಹಳಿಯೂರು ಗ್ರಾಮದ ಸರ್ವೇ ನಂಬರ್ 74 ರಲ್ಲಿ 4 ಎಕರೆ ಒಬ್ಬರಿಂದ ಮತ್ತು 3 ಎಕರೆ ಮತ್ತೊಬ್ಬರಿಂದ ಖರೀದಿ ಮಾಡಿರುತ್ತೇವೆ. ನಾನು ಕೇಳಿರುವ 4 ಎಕರೆ ಮತ್ತು 3 ಎಕರೆ ಜಾಗಕ್ಕೆ ಚಕ್ಕುಬಂದಿ ಬೇರೆ ಬೇರೆ ಯಾಗಿರುತ್ತದೆ ಎಂದರೆ ಸಾಕ್ಷಿಯೂ ಒಂದು ದಿಕ್ಕಿನಲ್ಲಿ ಮಾತ್ರ ಬೇರೆ ಇರುತ್ತದೆ ಎಂದು ನುಡಿಯುತ್ತಾರೆ. ಆ ರೀತಿ ದಕ್ಷಿಣ ದಿಕ್ಕಿನ ಚಕ್ಕುಬಂದಿ ಬೇರೆ ಆಗಿರುತ್ತದೆ . 4 ಎಕರೆ ಜಾಗದ ಪೂರ್ವಕ್ಕೆ ಬೈಲು ಬಸವೇಶ್ವರ ದೇವಸ್ಥಾನ ಹಾಗೂ ಪಾಳೇಗಾರ ಕ್ಯಾಂಪ್, ಪಶ್ಚಿಮಕ್ಕೆ ವಿಜ್ಞಾನ Industries ಮತ್ತು ಪವರ್ ಸ್ಟೇಷನ್ ಗೆ ಹೋಗುವ ರಸ್ತೆ , ಉತ್ತರಕ್ಕೆ ಸರ್ಕಾರಿ ಬಿ ಹೆಚ್ ರಸ್ತೆ, ದಕ್ಷಿಣಕ್ಕೆ ಗೌರಮ್ಮನವರ ಜಮೀನು ಇರುತ್ತದೆ ಇರುತ್ತದೆ. 3 ಎಕರೆ ಜಾಗದ ಪೂರ್ವಕ್ಕೆ ಬೈಲು ಬಸವೇಶ್ವರ ದೇವಸ್ಥಾನ ಹಾಗೂ ಪಾಳೇಗಾರ ಕ್ಯಾಂಪ್ , ಪಶ್ಚಿಮಕ್ಕೆ ವಿಜ್ಞಾನ Industries ಮತ್ತು ಪವರ್ ಸ್ಟೇಷನ್ ಗೆ ಹೋಗುವ ರಸ್ತೆ , ಉತ್ತರಕ್ಕೆ ಮೇಲೆ ಹೇಳಿದ 4 ಎಕರೆ ಜಾಗ , ದಕ್ಷಿಣಕ್ಕೆ ಒಬ್ಬರ ಜಮೀನು ಇರುತ್ತದೆ ಅವರ ಹೆಸರು ನನಗೆ ನೆನಪಿಲ್ಲ. ಎರಡೂ ಜಾಗಗಳು ಅನ್ಯಕ್ರಾಂತ ಅಗಿರುತ್ತದೆ ಎಂದರೆ ಸರಿ . ಸದರಿ ಅನ್ಯಕ್ರಾಂತಕ್ಕೆ ಸಂಬಂಧಪಟ್ಟ ದಾಖಲಾತಿಗಳು ನಮ್ಮ ಸೊಸೈಟಿಯಲ್ಲಿ ಲಭ್ಯ ಇರುತ್ತದೆ. ಈ ದಾವೆಯ

ಈಶ್ವರಪ್ಪರವರು ಯಾರ ವಿರುದ್ದ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ನ್ಯಾಯಾಲಯದಲ್ಲಿ ಈಶ್ವರಪ್ಪನವರ ದಾವೆಯಲ್ಲಿ ಸಾಕ್ಷಿ ನುಡಿಯಲು ಬಂದಿರುತ್ತೇನೆ. ಈ ದಾವೆಯಲ್ಲಿ ವಾದಿಯು ಯಾವೆಲ್ಲಾ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಏನೆಲ್ಲಾ ವಿಚಾರಗಳು ಬರೆದಿರುತ್ತದೆ ಎಂದರೆ ಈಗ ನನಗೆ ನೆನಪಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರ ತಯಾರಿಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಮ್ಮ ಸಂಘದಲ್ಲಿ ಯಾವುದೇ ಖಾಲಿ ನಿವೇಶನಗಳನ್ನು ನಾವು ಉಳಿಸಿಕೊಂಡಿರುವುದಿಲ್ಲ. ಹಿಂದೆ ನಮ್ಮ ಸಂಘದ ಅಭಿವೃದ್ದಿಗೋಸ್ಕರ ಕೆಲವು ಖಾಲಿ ನಿವೇಶನಗಳನ್ನು ಉಳಿಸಿಕೊಂಡಿದ್ದೇವು. ಎಷ್ಟು ಖಾಲಿ ನಿವೇಶನಗಳನ್ನು ಉಳಿಸಿಕೊಂಡಿದ್ದೇವು ಎಂದು ನನಗೆ ನೆನಪಿಲ್ಲ. ಅದೇ ರೀತಿ ಎಷ್ಟು ಖಾಲಿ ನಿವೇಶಗಳನ್ನು ಮಾರಟ ಮಾಡಿರುತ್ತೇವೆ ಎಂದು ಸಹ ನನಗೆ ನೆನಪಿಲ್ಲ. ಸಾಕ್ಷಿಯು ಮುಂದುವರೆದೂ ಸ್ವತಃ ಉಳಿಸಿಕೊಂಡ 8 ನಿವೇಶಗಳನ್ನು ಅಲಟ್‌ಮೆಂಟ್ ಮಾಡಿರುತ್ತೇವೆ ಎಂದು ನುಡಿದಿರುತ್ತಾರೆ. ಆ ರೀತಿ ಈಶ್ವರಪ್ಪ ರವರಿಗೆ ಎರಡು, ಲಲಿತಮ್ಮರವರಿಗೆ ಎರಡು, ನಾಗರತ್ನಮ್ಮ ರವರಿಗೆ ಒಂದು, ಮತ್ತು ಮತೊಬ್ಬರಿಗೆ ಎರಡು ನಿವೇಶನಗಳನ್ನು ಅಲಾಟ್‌ಮೆಂಟ್ ಮಾಡಿರುತ್ತೇವೆ. ಮೇಲೆ ಹೇಳಿದ 8 ನಿವೇಶನಗಳು ಒಂದೇ ಸಾಲಿನಲ್ಲಿ ಇರುವ ನಿವೇಶನಗಳಾಗಿದ್ದವು ಎಂದರೆ ಸರಿ. ಸದರಿ ನಿವೇಶನಗಳ ಪೂರ್ವಕ್ಕೆ ನಮ್ಮ ಲೇಔಟ್ ನ ರಸ್ತೆ ಬರುತ್ತದೆ ಎಂದರೆ ಸಾಕ್ಷಿಯು ಕೇವಲ ಎರಡು ನಿವೇಶನದ ಪೂರ್ವಕ್ಕೆ ರಸ್ತೆ ಇರುತ್ತದೆ ಎಂದು ನುಡಿದಿರುತ್ತಾರೆ ಸದರಿ ಎರಡು ನಿವೇಶನಗಳು ಜೈನ್ ಎನ್ನುವವರಿಗೆ ಸೇರಿರುತತದೆ ಅವರ ಪೂಶತಿ ಹೆಸರು ನನಗೆ ಗೊತ್ತಿಲ್ಲ. . ಸಾಕ್ಷಿ ಮುಂದುವರೆದು ಉತ್ತರಕ್ಕೆ ಬಿ ಹೆಚ್ ರಸ್ತೆ ಬರುತ್ತದೆ ಎಂದು ನುಡಿದಿರುತ್ತಾರೆ. ಸದರಿ ಜೈನ್ ರವರಿಗೆ ಅಲಾಟ್ ಮೆಂಟ್ ಮಾಡಿರುವ ನಿವೇಶನಗಳ ಚೆಕ್ಕುಬಂದಿ ನನಗೆ ತಿಳಿದಿರುತ್ತದೆ. ಅವರಿಗೆ ಕೊಟ್ಟ ಒಂದು ನಿವೇಶನದ ಪೂರ್ವಕ್ಕೆ ಬಡಾವಣೆ ರಸ್ತೆ, ಪಶ್ಚಿಮಕ್ಕೆ ಈಶ್ವರಪ್ಪ ರವರ ನಿವೇಶನ, ಉತ್ತರಕ್ಕೆ ಬಿ ಹೆಚ್ ರಸ್ತೆ , ದಕ್ಷಿಣಕ್ಕೆ ಈಶ್ವರಪ್ಪನವರ ಮತ್ತೊಂದು ನಿವೇಶನ ಮತ್ತು ಅವರಿಗೆ ಕೊಟ್ಟ ಮತ್ತೊಂದು ನಿವೇಶನದ ಪೂರ್ವಕ್ಕೆ ಬಡಾವಣೆ ರಸ್ತೆ, ಪಶ್ಚಿಮಕ್ಕೆ ಈಶ್ವರಪ್ಪ ನವರ ನಿವೇಶನ, ಉತ್ತರಕ್ಕೆ ಟಿ ಹೆಚ್ ರಸ್ತೆ ,ಮತ್ತು ದಕ್ಷಿಣಕ್ಕೆ ಬಡಾವಣೆಯ ತಿರುವು ರಸ್ತೆ. ಜೈನ್ ರವರಿಗೆ ನೀಡಿದ ಎರಡು ನಿವೇಶನ ವಿಸ್ತೀರ್ಣ ನನಗೆ ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

sd/-

ಸಿ.ಜೆ ಮತ್ತು ಹೆ. ಜೆ.ಎಂ.ಎಫ್.ಸಿ ನ್ಯಾಃ

ತರೀಕೆರೆ.

ಸಾಕ್ಷಿಯ ಸಹಿ: